## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2019-20ನೇ ಸಾಲಿನ ಆರ್ಥಿಕ ವರ್ಷದ ಜನವರಿ-2020 ರಿಂದ ಮಾರ್ಚ್-2020ರ ವರೆಗೆ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ನಾಲ್ಕನೇ ಕಂತಿನ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ;**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 120 ಜಿಪಸ 2019, ದಿನಾಂಕ: 10-05-2019, 30-08-2019 ಮತ್ತು 05-02-2020.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ರವರ ಪತ್ರ ಸಂಖ್ಯೆ:ರಾಗ್ರಾಸಂ.ಎಸಿಟಿ.ಸಿಆರ್:17: 2018-19, ದಿನಾಂಕ:27-01-2020.

**ಪ್ರಸ್ತಾವನೆ:**

2019-20ನೇ ಆಯವ್ಯಯದಲ್ಲಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಲೆಕ್ಕ ಶೀರ್ಷಿಕೆ:2515-00-102-0-08 ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ ನಿರ್ವಹಣಾ ಒತ್ತಾಸೆ ಹಾಗೂ ಜಿಲ್ಲಾ ಯೋಜನಾ ಸಂಸ್ಕರಣ ಬಲಪಡಿಸುವಿಕೆ ಕಾರ್ಯಕ್ರಮಗಳ ಅಡಿಯಲ್ಲಿ ಲೆಕ್ಕ ಶೀರ್ಷಿಕೆ:2515-00-102-0-08(101-ಸಹಾಯಾನುದಾನ-ವೇತನಗಳು)ರಡಿ ರೂ.215.00ಲಕ್ಷಗಳನ್ನು ಹಾಗೂ ಲೆಕ್ಕ ಶೀರ್ಷಿಕೆ:2515-00-102-0-08(103-ಸಹಾಯನುದಾನ-ಸಾಮಾನ್ಯ)ರಡಿ ರೂ.101.00ಲಕ್ಷ ಹಾಗೂ ಲೆಕ್ಕ ಶೀರ್ಷಿಕೆ:2515-00-102-0-08(115-ಸಹಾಯನುದಾನ-ಗುತ್ತಿಗೆ/ಹೊರಗುತ್ತಿಗೆ)ರಡಿ ರೂ.141.00ಲಕ್ಷಗಳನ್ನು ಸೇರಿ ಒಟ್ಟು ರೂ.457.00ಲಕ್ಷ ನಿಗಧಿಪಡಿಸಲಾಗಿರುತ್ತದೆ.

2019-20ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ:2515-00-102-0-08 (101-ಸಹಾಯಾನುದಾನ-ವೇತನಗಳು)ರಡಿ ರೂ.53.75ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ:2515-00-102-0-08 (103-ಸಹಾನುದಾನ-ಸಾಮಾನ್ಯ)ರಡಿ ರೂ.25.25ಲಕ್ಷಗಳ ಅನುದಾನಗಳನ್ನು ಹಾಗೂ ಲೆಕ್ಕ ಶೀರ್ಷಿಕೆ: 2515-00-102-0-08(115-ಸಹಾಯನುದಾನ-ಗುತ್ತಿಗೆ/ಹೊರಗುತ್ತಿಗೆ)ರಡಿ ರೂ.35.25ಲಕ್ಷಗಳ ಅನುದಾನವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಹಾಗೂ ಅದರ ಪ್ರಾದೇಶಿಕ ತರಬೇತಿ ಕೇಂದ್ರಗಳ ಅಧಿಕಾರಿಗಳು/ಸಿಬ್ಬಂದಿಗಳ ವೇತನ, ಭತ್ಯೆಗಳು, ವೇತನವಲ್ಲದ ಇತರ ವೆಚ್ಚಗಳಿಗಾಗಿ ಅನುದಾನಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಹಾಗೂ ಮೇಲೆ ಓದಲಾದ (1) ಆದೇಶಗಳಲ್ಲಿ ಬಿಡುಗಡೆಗೊಳಿಸಲಾದ ಅನುದಾನದ ವಿವರವೂ ಸಹ ಈ ಕೆಳಗಿನಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಒಂದನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ಎರಡನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ಮೂರನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ನಾಲ್ಕನೇ ಕಂತಾಗಿ ಬಿಡುಗಡೆಗೊಳಿಸುವ ಅನುದಾನ |
|---|---|---|---|---|---|---|
| 1. | 2515-00-102-0-08-101 (101-ಸಹಾಯಾನುದಾನ-ವೇತನಗಳು) | 215.00 | 53.75 | 53.75 | 53.75 | 53.75 |
| 2. | 2515-00-102-0-08-103 (103-ಸಹಾಯಾನುದಾನ-ಸಾಮಾನ್ಯ) | 101.00 | 25.25 | 25.25 | 25.25 | 25.25 |
| 3. | 2515-00-102-0-08-115 (115-ಸಹಾಯನುದಾನ-ಗುತ್ತಿಗೆ/ಹೊರಗುತ್ತಿಗೆ) | 141.00 | 35.25 | 35.25 | 35.25 | 35.25 |

ಮೇಲೆ ಓದಲಾದ (2)ರ ಪತ್ರದಲ್ಲಿ 2019-20ನೇ ಸಾಲಿನ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡುವ ಸಂಬಂಧ ಸಂಸ್ಥೆಯ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸರ್ಕಾರದಿಂದ ಮೊದಲನೇ, ಎರಡನೇ ಹಾಗೂ ಮೂರನೇ ಕಂತಿನಲ್ಲಿ ಬಿಡುಗಡೆ ಮಾಡಲಾದ ರೂ.342.75ಲಕ್ಷಗಳ ಅನುದಾನವನ್ನು ಜಿಲ್ಲಾ ಖಜಾನೆಯಿಂದ ಖಜಾನೆ-2 ತಂತ್ರಾಂಶದ ಮೂಲಕ ಸೆಳೆದಿರುತ್ತಾರೆ.

ದಿನಾಂಕ:27-01-2020ರ ಪ್ರಸ್ತಾವನೆಯಂತೆ 2019-20ನೇ ಸಾಲಿನಲ್ಲಿ ಸಂಸ್ಥೆಗೆ ಒದಗಿಸಿರುವ ಒಟ್ಟು ರೂ.457.00ಲಕ್ಷಗಳ ಅನುದಾನದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಂಸ್ಥೆಯ ಪ್ರಾದೇಶಿಕ ಕೇಂದ್ರಗಳ ಆಡಳಿತಾತ್ಮಕ ಮತ್ತು ಅಧಿಕಾರಿ/ ಸಿಬ್ಬಂದಿಗಳ ವೇತನ ಹಾಗೂ ಇತರೆ ಭತ್ಯೆಗಳಿಗಾಗಿ ನಾಲ್ಕನೇ ಕಂತಿನಲ್ಲಿ ಲೆಕ್ಕಶೀರ್ಷಿಕೆ:2515-00-102-0-08-101ರಡಿ ರೂ.53.75ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-102-0-08-103ರಡಿ ರೂ.25.25ಲಕ್ಷಗಳನ್ನು ಹಾಗೂ ಲೆಕ್ಕಶೀರ್ಷಿಕೆ: 2515-00-102-0-08-115ರಡಿ ರೂ.35.25ಲಕ್ಷಗಳ ಅನುದಾನವನ್ನು ಒಟ್ಟು ರೂ.114.25ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಹಾಗೂ ಅದರ ಪ್ರಾದೇಶಿಕ ತರಬೇತಿ ಕೇಂದ್ರಗಳಿಗೆ 4ನೇ ಕಂತಿನ ಅನುದಾನ ಬಿಡುಗಡೆಗೊಳಿಸಲು ಉದ್ದೇಶಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಜಿಪಸ 2019, ಬೆಂಗಳೂರು, ದಿನಾಂಕ:29-02-2020.**

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಹಾಗೂ ಅದರ ಪ್ರಾದೇಶಿಕ ಕೇಂದ್ರಗಳಾದ ಕಲಬುರಗಿ ಮತ್ತು ಧಾರವಾಡ ಹಾಗೂ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ, ಬೆಂಗಳೂರು ಇಲ್ಲಿನ ಅಧಿಕಾರಿಗಳು/ಸಿಬ್ಬಂದಿಗಳ ವೇತನ, ಇತರೆ ಭತ್ಯೆಗಳು ಹಾಗೂ ವೇತನವಲ್ಲದ ಇತರೆ ವೆಚ್ಚಗಳಿಗೆ ಒಟ್ಟು ರೂ.114.25 ಲಕ್ಷಗಳ(ಒಂದು ನೂರ ಹದಿನಾಲ್ಕು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಿದೆ.

ಈ ಅನುದಾನವನ್ನು ಲೆಕ್ಕ ಶೀರ್ಷಿಕೆ:2515-00-102-0-08(101-ಸಹಾಯಾನುದಾನ-ವೇತನಗಳು) ಯೋಜನೆಯಡಿ ಒದಗಿಸಿರುವ ರೂ.215.00ಲಕ್ಷಗಳಲ್ಲಿ ರೂ.53.75ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-102-0-08 (103-ಸಹಾಯಾನುದಾನ-ಸಾಮಾನ್ಯ) ಯೋಜನೆಯಡಿ ಒದಗಿಸಿರುವ ರೂ.101.00ಲಕ್ಷಗಳಲ್ಲಿ ರೂ.25.25 ಲಕ್ಷಗಳನ್ನು ಹಾಗೂ ಲೆಕ್ಕ ಶೀರ್ಷಿಕೆ:2515-00-102-0-08(115-ಸಹಾಯನುದಾನ-ಗುತ್ತಿಗೆ/ಹೊರಗುತ್ತಿಗೆ)ರಡಿ ಒದಗಿಸಿರುವ ರೂ.141.00ಲಕ್ಷಗಳಲ್ಲಿ ರೂ.35.25ಲಕ್ಷಗಳನ್ನು ಭರಿಸಲು ಮಂಜೂರಾತಿ ನೀಡಲಾಗಿದೆ.

ಸದರಿ ಅನುದಾನವನ್ನು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರುರವರ ಡಿಡಿ.ಓ ಕೋಡ್:0900PH0015ಗೆ ಖಜಾನೆ-2 ಮೂಲಕ ಬಿಡುಗಡೆಗೊಳಿಸಲು ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಶಾಖೆರವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2020, ದಿನಾಂಕ:13-01-2020ರಲ್ಲಿ ಆಯಾಯ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ

ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಗ್ರಾಅಪ 120 ಜಿಪಸ 2019, ದಿನಾಂಕ:25-02-2020ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/02/2020
(ಸಿ.ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

29.02.2020

**ಇವರಿಗೆ:**

1. ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು.
7. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಮೈಸೂರು ಜಿಲ್ಲೆ, ಮೈಸೂರು.
8. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-6), ವಿಧಾನಸೌಧ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
10. ಸಹ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), 12ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
11. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು.
12. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.